ಎಂದಿನಂತೆ ಶಾಲೆಗೆ ಹೊರಟ. ಶಾಲೆಗೆ ಹೋಗದೇ ರೈಲ್ವೇ ನಿಲ್ದಾಣ ಸೇರಿದ. ಅಮ್ಮ ತೋರಿಸಿದ ದಿಕ್ಕಿಗೆ ಹೋಗುವ ರೈಲು ಬರುವುದನ್ನು ಕಾದ. ಸ್ವಲ್ಪ ಹೊತ್ತಿನಲ್ಲಿಯೇ ಬಂದ ಬೆಂಗಳೂರು ಕಡೆ ಹೋಗುವ ರೈಲಿಗೆ ಹತ್ತಿಯೇ ಬಿಟ್ಟ ಅಪ್ಪನ ನೋಡುವ ಆಸೆಯನ್ನು ಕಣ್ಣಿನಲ್ಲಿ ತುಂಬಿಕೊಂಡು. ರೈಲು ಹೊರಟಿತು.

ಇತ್ತ ತಾಯಿಯ ಹೊಟ್ಟೆಯಲ್ಲಿ ಅದೇನೊ ಸಂಕಟವಾದಂತಾಗಿ ಕೆಲಸ ಮಾಡಲಾಗದೇ ಕೂಲಿಯನ್ನು ಮಧ್ಯಕ್ಕೆ ನಿಲ್ಲಿಸಿ ಎದ್ದು ಬಂದು ಮನೆ ಸೇರಿದಳು. ಶಾಲೆಯಿಂದ ಬರುವ ಮಗನನ್ನು ಕಾಯುತ್ತಾ!

* * *

ಆ ಹುಡುಗನ ತಾಯಿ ಈಗ ಅದೆಷ್ಟು ಗೋಳಾಡುತ್ತಿರಬಹುದೆಂದು ಕಣ್ಣು ಮುಂದೆ ತಂದುಕೊಂಡೆ. ಒಂದು ಕ್ಷಣ ನಾನೆ ಬೆವೆತು ಹೋದೆ. ಏನಾದರೂ ಆಗಲಿ ಈ ಜೀವನದಲ್ಲಿ ಏನು ಮಾಡದಿದ್ದರೂ ಪರವಾಗಿಲ್ಲ. ತಾಯಿಯೊಂದಿಗೆ ಈ ಮಗುವನ್ನು ಸೇರಿಸಿ ಬಿಡಬೇಕು ಅನಿಸಿತು. ಆ ಕ್ಷಣ ನಾ ಹೋಗಬೇಕಾದ ಯಾವ ಕೆಲಸವೂ ಮುಖ್ಯ ವೆನಿಸಲಿಲ್ಲ  ಮಗುವಿನ ಕೈಹಿಡಿದು ಆಚೆ ಬಂದೆ. ಅದೇ ತೊದಲು ಮಾತುಗಳಲ್ಲಿ ಅವನ ಊರನ್ನು ಹುಡುಕಿಕೊಂಡಿದ್ದೆ. ತಡಮಾಡದರೆ ಒಳ್ಳೆಯದಲ್ಲ ಈಗಲೇ ಹೊರಟು ಬಿಡಬೇಕು ಅಂತ ನಿರ್ಧರಿಸಿದೆ. ಡಿಸಿಯನ್ನು ವಿಚಾರಿಸಿ ಇನ್ನರ್ಧ ಗಂಟೆಯಲ್ಲಿ ಬರಬಹುದಾದ ಆ ಮಾರ್ಗದ ಟ್ರೈನಿಗೆ ಎರಡು ಟಿಕೆಟ್ ತಗೆದುಕೊಂಡು ಟ್ರೈನ್ ಬರುವಿಕೆಗೆ ಕಾದೆ.

* * *

ಮರುದಿನ ಬೆಳಗ್ಗೆ ಹುಡುಗನ ಊರು ಮುಟ್ಟಿದಾಗ ಹುಡುಗನ ಮುಖ ಗೆಲುವಾಗಿತ್ತು. 'ಇದೇ ಇದೇ ಅಂಕಲ್ ನಮ್ಮೂರು' ಅಂತ ಮೊದಲ ಬಾರಿ ಸ್ಪಷ್ಟವಾಗಿ ಖುಷಿಯಾಗಿ ಮಾತಾಡಿದ್ದ. ತನ್ನ ಮನೆ ತೋರಿಸಲು ಎರಡೆರಡು ಹೆಜ್ಜೆ ಮುಂದೆಯೇ ಹಾಕಿ ದಾರಿ ತೋರಿಸುವವನಂತೆ ನಡೆದಿದ್ದ. ತುಸು ದೂರ ನಡೆದ ಮೇಲೆ ದೂರದಿಂದಲೇ ಅವನ ಮನೆ ತೋರಿಸಿದ. ಅವರ ಮನೆಯ ಮುಂದೆ ಜನ ಸೇರಿತ್ತು. ಏನೋ ಕಳಾಹೀನ ಸ್ಥಿತಿ. ಹುಡುಗ ಕಳೆದು ಹೋಗಿರುವುದಕ್ಕೆ ಜನ ಸೇರಿರಬಹುದು ಎಂಬುದು ನನಗೆ ಖಚಿತವಾಯಿತು.  ಹುಡುಗನಿಗೆ ತನ್ನ ಮನೆ ಮುಂದೆ ನಿಂತಿರುವ ಜನರನ್ನು ನೋಡಿ ಏನು ಅನಿಸಿತೊ ಏನೊ ತಿಳಿಯುವುದು ಹೇಗೆ?

ಮನೆಗೆ ಒಂಚೂರು ದೂರವಿರುವಾಗಲೇ ತುಂಬಾ ಜನ ಅಳುವುದು ಕೇಳಿಸಿತು. ಹುಡುಗನ ಮುಖದಲ್ಲಿ ಭಯ ಕಂಡೆ. ಅವರ ಮನೆಯ ಅಂಗಳ ಸೇರಿದೆವು. ಮಗುವನ್ನು ನೋಡಿದ್ದೆ ಯಾರ್‍ಯಾರೊ ಬಂದು ಮಗುವನ್ನು ಹಿಡಿದುಕೊಂಡರು, ತಬ್ಬಿಕೊಂಡರು, ಕೆಲವರು ಬೈದರು ಹೀಗೆ ಏನೆಲ್ಲಾ ಆಗುತ್ತಿತ್ತು. ಯಾರೊ ಹೇಳಿದ ಮಾತು ನನ್ನನ್ನು ಕುಸಿದು ಬೀಳಿಸಿತ್ತು.
'ಹೊಟ್ಟೆಯಲ್ಲಿರುವಾಗ ತಂದೆ ಕಿತ್ತುಕೊಂಡ, ಹೊರಗೆ ಬಂದು ತಾಯಿ ಕಿತ್ತುಕೊಂಡ. ಶನಿ ಮಗುವೇ ಇರಬೇಕು! ಮತ್ಯಾಕೆ ಬಂದೆ ಎಲ್ಲದರೂ ಹಾಳಾಗಿ ಹೋಗಬೇಕಿತ್ತು' ಅಂದಿತ್ತು ಒಂದು ಹಿಂದೆ ನಿಂತಿದ್ದ ಒಂದು ದೇಹ. ಹುಡುಗನನ್ನು ಕೆಲವು ಹೆಂಗಸರು ಕರೆದುಕೊಂಡು ಒಳಗೆ ಹೋದರು. ಒಳಗಿನಿಂದ 'ಅಮ್ಮಾ ಅಮ್ಮಾ ನಾ ಬಂದಿದೀನಿ ಏಳಮ್ಮ. ನೀನು ಸತ್ತಿದಿಯಂತೆ. ಬೇಡಮ್ಮ ಸಾಯಬೇಡಮ್ಮ. ನಂಗೆ ಯಾರೂ ಇಲ್ಲ ಅಮ್ಮ. ಇನ್ಮೇಲೆ ನಿನ್ ಬಿಟ್ಟು ಹೋಗಲ್ಲ ಅಮ್ಮ. ಏಳಮ್ಮ, ಸಾಯಬೇಡಮ್ಮ. ಎದ್ದೇಳಮ್ಮ' ಎನ್ನುತ್ತ ಮಗುವು ಅಳುವುದು ಕೇಳಿಸಿತು. ಅಳು ತಡೆಯಲಾಗಲಿಲ್ಲ. ಸಾವರಿಸಿಕೊಂಡು 'ಏನಿದು? ಯಾಕೆ ಹೀಗಾಯ್ತು?' ಅಂತ ವಿಚಾರಿಸಿದೆ. ಅಲ್ಲೊಬ್ಬ ಹೇಳಿದ

'ನಿನ್ನೆ ಏನು ಆಗಬಾರದಿತ್ತೊ ಅದು ನಡೆದು ಹೊಯಿತು. ಮಗ ಸರಿಯಾದ ಟೈಮಿಗೆ ಸ್ಕೂಲ್ ನಿಂದ ಬರದೇ ಇದದಕ್ಕೆ ತಾಯಿ ಭಯಗೊಂಡಳು. ಆಚೆ ಬಂದು ಕಾದಳು. ಕಂಡ ಕಂಡವರ ಕೇಳಿದಳು. ಹುಚ್ಚಿಯಾದಳು. ಅವರಲ್ಲೊಬ್ಬ ಯಾರೊ 'ನಿಮ್ಮ ಮಗ ಬೆಂಗಳೂರು ಕಡೆ ಹೋಗುವ ಟ್ರೈನ್ ಹತ್ತಿದನ್ನುನಾ ನೋಡಿದೆ ಬೆಳಗ್ಗೆ' ಅಂದ. ತಾಯಿ ಕುಸಿದು ಬಿದ್ದಳು. ಜೋರಾಗಿ ಅತ್ತಳು. ಮಗನ ಹೆಸರಿಡಿದು ಕೂಗಿದಳು. ಬೆಂಗಳೂರು ಟ್ರೈನ್ ಹತ್ತಿದ ಕಾರಣ ಅವಳಿಗೆ ಅರ್ಥವಾಗಿ ಹೋಗಿತ್ತು. ಅದಕ್ಕೆ ಇನ್ನೊಷ್ಟು ರೋದಿಸಿದಳು. ರೈಲು ನಿಲ್ದಾಣದ ಕಡೆ ಓಡಿದಳು, ಬೆಂಗಳೂರಿಗೆ ಹೋಗಿ ಬಿಡುವ ನಿರ್ಧಾರದೊಂದಿಗೆ. ಆಗಲೇ ನಿಲ್ದಾಣ ಬಿಡುತ್ತಿದ್ದ ಬೆಂಗಳೂರು ಟ್ರೈನ್ ಹತ್ತಲು ಓಡಿದಳು. ರೈಲಿನ ವೇಗ ಹೆಚ್ಚಾಯಿತು. ಓಡಿ ಬಂದು ಇನ್ನೇನು ಹತ್ತಬೇಕು ಅನ್ನುವಷ್ಟರಲ್ಲಿ ಆಯ ತಪ್ಪಿ ಬಿದ್ದಳು. ಬಿದ್ದವಳು ಮತ್ತೆ ಏಳಲೇ ಇಲ್ಲ ತಲೆ ಹಿಂಬದಿಗೆ ಏಟು ಬಿದ್ದು ಅಲ್ಲೇ ಜೀವ ಹೋಗಿತ್ತು. ಅಮೇಲೆ ತಂದು ರಾತ್ರಿಯಲ್ಲಾ ಇಟ್ಕೊಂಡ್ವಿ ಹೆಣನ' ಅಂದ.

ತಲೆ ತಿರುಗಿದಂತಾಯ್ತು. ಮಗುವಿನ ಸ್ಥಿತಿ? ಯಾಕೊ ಏನು ತಿಳಿಯಲಿಲ್ಲ. ಅಲ್ಲಿರಲು ಆಗಲಿಲ್ಲ. ಹೊರಡಲು ತಿರುಗಿ ಹೆಜ್ಜೆ ಹಾಕಿದೆ, ಹಿಂದಿನಿಂದ ಬಂದ ಮಗುವೊಂದು ಕೈ ಹಿಡಿಯಿತು. ತಿರುಗಿ ನೋಡಿದೆ. 'ಅಂಕಲ್ ಅಮ್ಮ ಸಾಯ್ತಾರಂತೆ ಬೇಡ ಅನ್ನಿ. ನೀವು ಒಳ್ಳೆಯವರು ನಿಮ್ಮ ಮಾತನ್ನ ಅಮ್ಮ ಕೇಳ್ತಾರೆ. ಹೇಳಿ ಅಂಕಲ್, ನನಗೆ ಅಮ್ಮ ಬೇಕು ಅಂಕಲ್. ನಂಗೆ ಅಮ್ಮನ್ನ ಬಿಟ್ರೆ ಯಾರೂ ಇಲ್ಲ ಅಂಕಲ್. ಕೊಡ್ಸಿ ಅಂಕಲ್. ನೀವು ಮನಸ್ಸು ಮಾಡಿದರೆ ಆಗುತ್ತೆ. ನೀವು ಒಳ್ಳೆಯವರು ಅಂಕಲ್ ಪ್ಲೀಸ್ ಅಂಕಲ್' ಅಂತ ಅಳುತ್ತಲೇ ಇತ್ತು. ಮಗುವನ್ನು ತಬ್ಬಿಕೊಂಡು ಬಿಕ್ಕಿ ಬಿಕ್ಕಿ ಅತ್ತುಬಿಟ್ಟೆ!

# ದ್ವೇಷವೋ.. ಸ್ನೇಹವೋ..

■ ಟಿ.ಎಂ.ಸುಬ್ಬರಾಯ

ಅವರಿಬ್ಬರೂ ಒಂದೇ ಊರಿನವರು. ಒಂದೇ ಜಾತಿಯವರು. ಒಂದೇ ಹಾಸ್ಟೆಲ್‌ನಲ್ಲಿ ವಾಸಿಸುತ್ತಿರುವವರು. ಒಂದೇ ಕಾಲೇಜಿನಲ್ಲಿ ಓದುತ್ತಿರುವವರು. ಇಬ್ಬರ ಎತ್ತರವೂ ಒಂದೇ. ತೂಕವೂ ಸರಿಸುಮಾರು ಸಮಸಮ.

ಒಬ್ಬಳ ಹೆಸರು ಮಾಲಾ; ಇನ್ನೊಬ್ಬಳ ಹೆಸರು ಕಲಾ. ಹಾಸ್ಟೆಲ್‌ನಲ್ಲಿ ಅವರದು ಎದುರು ಬದುರು ರೂಮು. ಕ್ಲಾಸ್‌ನಲ್ಲಿ ಆ ಬದಿಯ ಮೊದಲ ಸಾಲಿನ ಮೊದಲ ಬೆಂಚಿನ ಈ ತುದಿಯಲ್ಲಿ ಮಾಲಾ; ಈ ಬದಿಯ ಮೊದಲ ಸಾಲಿನ ಆ ತುದಿಯಲ್ಲಿ ಕಲಾ.

ಇಬ್ಬರೂ ಬುದ್ಧಿವಂತೆಯರೇ. ಒಂದು ಟೆಸ್ಟ್‌ನಲ್ಲಿ ಮಾಲಾ ಪ್ರಥಮಳಾದರೆ ಮತ್ತೊಂದು ಟೆಸ್ಟ್‌ನಲ್ಲಿ ಕಲಾಳದು ಮೊದಲ ಸ್ಥಾನ. ಮಾಲಾ ಕಲಾ ಇಬ್ಬರೂ ರೂಪವಂತೆಯರೇ. ಇಬ್ಬರದೂ ಗೋದಿ ಬಣ್ಣದ ಮೈಕಟ್ಟು. ಎನ್ಚಾಂಟಿಂಗ್ ಐಸ್ ಅನ್ನುತ್ತಾರಲ್ಲಾ ಅಂಥಾ ಹೊಳಪುಗಣ್ಣುಗಳು. ನೀಳ ನಾಸಿಕ. ಮಾತ್ರವಲ್ಲ ಇಬ್ಬರೂ ನೀಳವೇಣಿಯರು.

ಆದರೆ.. ಡ್ರೆಸ್ ವಿಷಯದಲ್ಲಿ ಇಬ್ಬರೂ ತದ್ವಿರುದ್ಧ. ಒಬ್ಬಳಿಗೆ ಪಿಂಕ್ ಕಲರ್ ಇಷ್ಟ; ಇನ್ನೊಬ್ಬಳಿಗೆ ಹಸಿರು ಬಣ್ಣ ಇಷ್ಟ. ಮಾಲಾ ಚೂಡಿ ಪ್ರಿಯಳು; ಕಲಾಳಿಗೆ ಸೀರೆ ಉಡುವುದೆಂದರೆ ಇಷ್ಟ. ಮುಡಿದುಕೊಳ್ಳುವ ಹೂವಿನಲ್ಲಿಯೂ ಇಬ್ಬರದೂ ಬೇರೆ ಬೇರೆ ಅಭಿರುಚಿ. ಮಾಲಾಳಿಗೆ ಕನಕಾಂಬರ ಹೂವಿನ ಮೇಲೆ ವ್ಯಾಮೋಹ; ಕಲಾಳಿಗೆ ಬಿಳಿಯ ಮಲ್ಲಿಗೆಯ ಮೇಲೆ ವ್ಯಾಮೋಹ.

ತಿಂಡಿ ತಿನಿಸುಗಳ ಬಗ್ಗೆಯೂ ಇಬ್ಬರದೂ ಬೇರೆ ಬೇರೆ ಡಿಶ್‌ಗಳ ಬಗ್ಗೆ ಆಸಕ್ತಿ. ಮಾಲಾಳಿಗೆ ಸಿಹಿ ತಿನಿಸುಗಳೆಂದರೆ ಪ್ರಾಣ. ಕಲಾಳಿಗೆ ಸಿಹಿ ತಿಂಡಿಗಳೆಂದರೆ ಆಗದು. ಆಕೆಗೆ ಕರಿದ ಖಾರದ ಪದಾರ್ಥಗಳೆಂದರೆ ಇಷ್ಟ.

ಮಾಲಾಳಿಗೆ ಹಿಂದಿ ಸಿನಿಮಾಗಳ ಬಗ್ಗೆ ಒಲವು; ಕಲಾಳಿಗೆ ತೆಲುಗು ಸಿನಿಮಾಗಳೆಂದರೆ ಪರಮ ಪ್ರೀತಿ. ಇಬ್ಬರೂ ಇಷ್ಟಪಡುವ ನಟ ನಟಿಯರೂ ಬೇರೆ ಬೇರೆಯೇ. ಸಿನಿಮಾ ರಿಲೀಸ್ ಆದ ಮೊದಲ ದಿನ ಮೊದಲ ಶೋ ನೋಡುವವವಳು ಮಾಲಾ; 'ಇಂದು ಕಡೆಯ ಆಟ' ಎನ್ನುವ ಜಾಹಿರಾತು ಕಣ್ಣಿಗೆ ಬಿದ್ದ ದಿನ, ಅದು ನಿಜವೇ ಎಂದು ಖಾತ್ರಿ ಪಡಿಸಿಕೊಂಡು ಕೊನೆಯ ದಿನದ ಕೊನೆಯ ಶೋಗೆ ಹೋಗುವವಳು ಕಲಾ.

ಮಾಲ್‌ಗೆ ಹೋಗುವುದೆಂದರೆ ಮಾಲಾಳಿಗೆ ಎಲ್ಲಿಲ್ಲದ ಖುಷಿ. ಮಾಲ್, ಸ್ಟೋರ್ಸ್..ಊಹ್ಞೂಂ..ಕಲಾಳಿಗೆ ಬಿಲ್ಕುಲ್ ಇಷ್ಟವಿಲ್ಲ.